**ದಿನಾಂಕಃ 03.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- 2ನೇ ಪ್ರತಿವಾದಿ ಪರ ಶ್ರೀ ಎಸ್.ಎಸ್. ವಕೀಲರಿಂದ**

1) ಚನ್ನೇಗೌಡ ಅಲಿಯಾಸ್ ಮರಿಯಪ್ಪ ರವರ ಮಗ ರಂಗೇಗೌಡ ಮತ್ತು ವೀರೇಗೌಡರ ಮಗ ರಾಜಣ್ಣ ನನಗೆ ಗೊತ್ತು. ಸರ್ವೆ ನಂ.117/2 ಮತ್ತು 117/3 ರಲ್ಲಿ ತಲಾ 20 ಗುಂಟೆ ಯನ್ನು ದಿಃ30.03.1999 ರಲ್ಲಿ ತಮ್ಮಣ್ಣ ಮಗ ಮಲ್ಲೇಶ್ ರವರಿಂದ 2ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಿಃ29.05.2008 ರಲ್ಲಿ ರಂಗೇಗೌಡರಿಂದ ಸರ್ವೆ ನಂ.117/4 ರಲ್ಲಿ 20 ಗುಂಟೆ ಸ್ವತ್ತನ್ನು 2ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಿಃ29.03.2016 ರಲ್ಲಿ ವೀರೇಗೌಡರ ಮಗ ರಾಜಣ್ಣ ರವರಿಂದ ಸರ್ವೆ ನಂ.117/6 ಮತ್ತು 117/7 ರಲ್ಲಿ ತಲಾ 15 ಗುಂಟೆಯಂತೆ ಒಟ್ಟು 30 ಗುಂಟೆಯನ್ನು 2ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ಮೇಲೆ ಹೇಳಿದ ಎಲ್ಲಾ ಸ್ವತ್ತುಗಳು 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಸೇರಿ ಖರೀದಿ ಮಾಡಿರುವುದು ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಎಲ್ಲಾ ಸ್ವತ್ತುಗಳು 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಇಂದಿಗೂ ಕೂಡ 2ನೇ ಪ್ರತಿವಾದಿಯ ಹೆಸರಿಗೆ ಖಾತೇ ಇದೆ ಎಂದರೆ ಸರಿ.

2) ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ರ ಸ್ವತ್ತುಗಳ ಮೇಲೆ ಪಿಎಲ್ ಡಿ ಬ್ಯಾಂಕ್ ನಲ್ಲಿ ಸಾಲ ಇತ್ತು ಎಂದರೆ ಸರಿಯಲ್ಲ. ತಿಮ್ಮೇಗೌಡರ ಮಗ ಕುನ್ನೇಗೌಡ ಎಂದರೆ ನಮ್ಮ ತಂದೆ. ಸದರಿಯವರು ದಿಃ13.03.1990 ರಲ್ಲಿ ಪಿಎಲ್ ಡಿ ಬ್ಯಾಂಕ್ ನಲ್ಲಿ 6000 ರೂಗಳನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಸಾಲವನ್ನು 2ನೇ ಪ್ರತಿವಾದಿ ತೀರುವಳಿ ಮಾಡಿ ದಿಃ06.09.2007 ರಂದು ತೀರುವಳಿ

ಪತ್ರ ಸಹಾ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ರ ಸ್ವತ್ತುಗಳು ಮೂಲ ನಮ್ಮ ತಂದೆಯವರಿಗೆ ಸೇರಿದ ಸ್ವತ್ತುಗಳು. ಈ ಬಗ್ಗೆ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಮಾನ್ಯವಾಗಿ ಜಮೀನಿನ ಮೇಲೆ ಸಾಲ ಪಡೆದರೆ ಅದನ್ನೂ ಪಹಣಿ ಪತ್ರಿಕೆಯಲ್ಲೂ ನಮೂದಿಸಲಾಗುತ್ತದೆ ಎಂದರೆ ಗೊತ್ತಿಲ್ಲ.

3) ದಾವಾ ಷೆಡ್ಯೂಲ್ ಐಟಂ ನಂ.1, 2 ಮತ್ತು 4 ರಲ್ಲಿ ವಾದಿ ಮತ್ತು ಪ್ರತಿವಾದಿಗೆ ಸಮವಾಗಿ ಭಾಗ ನೀಡಲು ನನ್ನ ಅಭ್ಯಂತರವೇನು ಇಲ್ಲ. ದಾವಾ ಷೆಡ್ಯೂಲ್ ಐಟಂ ನಂ.3 ಮತ್ತು 5 ರ ಸ್ವತ್ತುಗಳು 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು. ಹಾಗಾಗಿ ನಿಮಗೂ ಮತ್ತು ಇತರೆ ಪ್ರತಿವಾದಿಗಳಿಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಪತ್ನಿಯ ಹಾಗೂ ಮಾವನ ಮಗನ ವಿರುದ್ಧ 2ನೇ ಪ್ರತಿವಾದಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ದ್ವೇಷದಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.3 ರ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಲು ಹೋದಾಗ ಅವರ ವಿರುದ್ದ ಪ್ರಸ್ತುತ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಸೇರಿದ ಸ್ವತ್ತುಗಳನ್ನು ಮಾತ್ತ ದಾವೆಯಲ್ಲಿ ಸೇರಿಸಿದ್ದು ನಿಮ್ಮ ಸ್ವತ್ತುಗಳನ್ನುದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಉಳಿದ ಪ್ರತಿವಾದಿಗಳು 2ನೇ ಪ್ರತಿವಾದಿಯ ಅಭಿವೃದ್ಧಿಯನ್ನು ಸಹಿಸಲಾಗದೆ ಈ ಸುಳ್ಳು ದಾವಾ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

4) ನನ್ನ ತಂದೆ ಮತ್ತು ತಾಯಿ ಬದುಕಿದ್ದ ಕಾಲದಲ್ಲಿಯೇ ಪ್ರಿತ್ರಾರ್ಜಿತ ಆಸ್ತಿಯಿಲ್ಲಿ ಬಾಗ ಕೇಳಲು ತೊಂದರೆ ಇರಲಿಲ್ಲ ದಾವಾ ಷೆಡ್ಯೂಲ್ ಐಟಂ ನಂ.3 ಮತ್ತು 5 ರ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಅದು 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಸ್ವತ್ತುಗಳನ್ನು ಕಬಳಿಸುವ ಉದ್ದೇಶ ಹೊಂದಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂರದೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**